# ಗಂಧವ್ರತ



'ಗಂಧವ್ರತ' ಎಂಬುದು ಡಾ. ಎಚ್.ಎಸ್. ವೆಂಕಟೇಶ ಮೂರ್ತಿಯವರ ಒಂದು ಚೆಲುವಾದ ಸಾನೆಟ್‌ನ ಶೀರ್ಷಿಕೆ. ಅನ್ಯೋಕ್ತಿಯಂತಿರುವ ಈ ಕವಿತೆ ಹೆರರ ಒಳಿತಿಗಾಗಿ ಅಥವಾ ಸಂತೋಷಕ್ಕಾಗಿ ತನ್ನನ್ನೇ ತಾನು ಸಂಕಟಕ್ಕೆ ಒಡ್ಡಿಕೊಳ್ಳುವ ಅಗರಬತ್ತಿಯ ಆದರ್ಶವನ್ನು ಎತ್ತಿಹಿಡಿಯುತ್ತದೆ. ಯಾರ ಕಣ್ಣಿಗೂ ಬೀಳದಂತೆ ಯಾವುದೋ ಒಂದು ಮೂಲೆಯಲ್ಲಿದ್ದು, 'ವ್ರತದಂತೆ ಒಂದೆ ಹದದಲ್ಲಿ ಎದೆಯಲ್ಲೊಂದು ಕಿಡಿಗೆಂಡ ಹಿಡಿದು' ನಿಧಾನವಾಗಿ ತನ್ನನ್ನೇ ದಹಿಸಿಕೊಳ್ಳುತ್ತಾ, ಸುತ್ತಲೂ ಸುಗಂಧದ ಪರಿವೇಷವನ್ನು ಸೃಷ್ಟಿಸುವ ಅಗರಬತ್ತಿಯದು ಲೋಕ ಹಿತವನ್ನು ಸಾಧಿಸುವ 'ಗಂಧವ್ರತ', ತಾನು ನಾಲ್ಕು ಮಂದಿಯ ಪ್ರಶಂಸೆಗೆ ಒಳಗಾಗಬೇಕೆಂಬ ಹಂಬಲವಾಗಲೀ, ತನ್ನದು ಬಹುದೊಡ್ಡ ತ್ಯಾಗವೆಂಬ ಅಹಂಕಾರವಾಗಲೀ ಅದಕ್ಕಿಲ್ಲ. ತನ್ನ ಪರಿಮಿತಿಯಲ್ಲಿ, ಸದ್ದು ಗದ್ದಲವಿಲ್ಲದೆ, ಸುತ್ತಲಿನ ಕೆಲವರಿಗಾದರೂ ಸಂತೋಷವನ್ನುಂಟು ಮಾಡಬೇಕೆಂಬ ತುಡಿತ ಅದರದು. ಇಂಥ ವಿನಯವಂತಿಕೆಯನ್ನು ಬಹುದೊಡ್ಡ ಮೌಲ್ಯವೆಂದು ಡಿ.ವಿ.ಜಿ. ತಮ್ಮ 'ವನಸುಮ' ಎಂಬ ಕವಿತೆಯಲ್ಲಿ ಪ್ರತಿಪಾದಿಸಿದ್ದಾರೆ. 'ಕಾನನದಿ ಮಲ್ಲಿಗೆಯು ಮೌನದಿಂಬಿರಿದು, ನಿಜ ಸೌರಭವ ಸೂಸಿ, ನಲವಿಂ ತಾನೆಲೆಯ ಪಿಂತಿರ್ದು ದೀನತೆಯ ತೋರಿ, ಅಭಿಮಾನವನು ತೊರೆದು, ಕೃತಕೃತ್ಯತೆಯ ಪಡೆವಂತೆ' ತಮ್ಮಲ್ಲೂ ಇಂಥ ವಿನಯ ನೆಲೆಸಲಿ– ಎನ್ನುತ್ತಾರೆ ಡಿ.ವಿ.ಜಿ.

ಕಾಡು ಮಲ್ಲಿಗೆಯ ಹಾಗೂ ಅಗರಬತ್ತಿಯ ಜೀವನಧ್ಯೇಯ ಒಂದೇ ಆದರೂ, ಅದರ ಅನುಷ್ಠಾನ ಮಾರ್ಗದಲ್ಲಿ ಕೊಂಚ ವ್ಯತ್ಯಾಸವಿರುವುದನ್ನು ಗಮನಿಸಬೇಕು. ಕಾಡಿನ ಹೂವು ಎಲೆಯ ಮರೆಯಲ್ಲೇ ಅರಳಿ, ನಿರ್ದಿಷ್ಟ ಅವಧಿಯವರೆಗೆ ಕಂಪು ಬೀರಿ, ಅವಧಿ ತೀರಿದ ನಂತರ ಕೆಳಗುರುಳುತ್ತದೆ. ಅಲ್ಲಿ ವಿನೀತ ಭಾವವಿದೆ; ಆದರೆ ವಿಶೇಷ ತ್ಯಾಗವೇನಿಲ್ಲ. ಅಗರ ಬತ್ತಿ ತನ್ನನ್ನು ತಾನೇ ದಹಿಸಿಕೊಳ್ಳುತ್ತಾ, ಪರಿಸರವನ್ನು ಸುಗಂಧಿತ ಗೊಳಿಸುತ್ತದೆ. ಅದರದು ಬಲಿದಾನದ ಮೂಲಕ ಲೋಕಕ್ಕೆ ಸಂತೋಷ ಕೊಡುವ ಧೀರ ಮಾರ್ಗ; ಸಂಕಟದ ಮೂಲಕ ಔನ್ನತ್ಯವನ್ನು ಸಾಧಿಸುವ ರೀತಿ. ವನಸುಮ ಆರಿಸಿಕೊಂಡುದು ಸ್ವಂತಕ್ಕೆ ಧಕ್ಕೆಯಾಗದ ಪರಾರ್ಥದ ಮಾರ್ಗ. ದಿಲೀಪ, ಶಿಬಿ, ದಧೀಚಿ, ಜೀಮೂತವಾಹನ– ಮುಂತಾದವರು ಸ್ವಹಿತವನ್ನು ಬಲಿಕೊಟ್ಟು ಪರಹಿತವನ್ನು ಆಗಮಾಡುವ ಬಲಿದಾನದ ಪಥವನ್ನು ಹಿಡಿದವರು ಸಾಕ್ರೆಟೀಸ್, ಜೀಸಸ್, ಗಾಂಧೀಜಿ– ಇನ್ನೂ ಅನೇಕರು ಈ ದಾರಿಯಲ್ಲೇ ನಡೆದು ದೊಡ್ಡವರಾದವರು. ರಾಮಾಯಣದ ಊರ್ಮಿಳೆ ಹದಿನಾಲ್ಕು ವರ್ಷಗಳ ಕಾಲ ಪತಿಯಿಂದ ದೂರವಿದ್ದು 'ನೀರವ ಧ್ಯಾನ ವಧುವಾಗಿ' ಸಕಲ ಲೌಕಿಕ ಭೋಗಗಳಿಗೂ ವಿಮುಖಳಾಗಿ, ರಾಮ ಸೀತೆ ಲಕ್ಷ್ಮಣರ ಚಿಂತನೆ ಮಾಡುತ್ತಾ ಕಾಲ ಕಳೆದ ತಪಸ್ವಿನಿ, ಮಹಾಭಾರತದ ಕುಂತಿ ತನ್ನ ಮಕ್ಕಳ ಜೊತೆಗೆ, ತನ್ನ ಸವತಿಯ ಮಕ್ಕಳನ್ನೂ ಸಮಾನ ಪ್ರೀತಿಯಿಂದ ಬೆಳೆಸಿ, ಅವರ ಅಭ್ಯುದಯವನ್ನೇ ಹಾರೈಸುತ್ತಾ ವಿರಾಗಿಣಿಯಾಗಿ ಬದುಕಿದಳು. ಇಂಥವರೆಲ್ಲರದೂ ಒಂದು ಅರ್ಥದಲ್ಲಿ ಗಂಧವ್ರತವೆಂದರೆ ತಪ್ಪಲ್ಲ.

ಕಾರಂತರ ಕಾದಂಬರಿಗಳಲ್ಲಿ ಬರುವ ಅನೇಕ ಮಹಿಳೆಯರೂ, ಭೈರಪ್ಪನವರ 'ಗೃಹಭಂಗ'ದ ನಂಜಮ್ಮನಂಥವರೂ ಊರ್ಮಿಳೆ, ಕುಂತಿಯರ ಸಾಲಿಗೆ ಸೇರಿದವರೇ. ತಮ್ಮ ಸಂಸಾರದ ಹಿತಕ್ಕಾಗಿ ತಮ್ಮನ್ನು ಸರ್ವಾರ್ಪಣ ಮಾಡಿಕೊಂಡು, ಗಂಧದ ಕೊರಡಿನಂತೆ ತಮ್ಮನ್ನು ತೇಯ್ದುಕೊಳ್ಳುವ ಅಜ್ಞಾತ ತಾಪಸಿಯರು ನಮ್ಮ ಸುತ್ತಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ, ಆದ್ದರಿಂದಲೇ ಕುವೆಂಪು ಭಾರತೀಯ ಸ್ತ್ರೀಯರನ್ನು 'ಮನೆ ಮನೆಯ ತಪಸ್ವಿನಿಯರು' ಎಂದು ವರ್ಣಿಸಿದುದು ಮಹಾಭಾರತದಲ್ಲೂ 'ದುಃಖೇನ ಸಾಧ್ವೀ ಲಭತೇ ಸುಖಾನಿ' (ಸದ್ಗೃಹಿಣಿ ದುಃಖದಿಂದ ಸುಖ ಪಡೆಯುತ್ತಾಳೆ) ಎಂಬ ಹೇಳಿಕೆಯಿದೆ, ಇದು 'ಗಂಧವ್ರತ' ಪರಿಕಲ್ಪನೆಗೆ ಪೂರಕವಾಗಿದೆಯಲ್ಲವೆ?

■ ವೈನತೇಯ

# ಮಾತೇ ಮುತ್ತು

ದೇವರಿದ್ದಾನೆಯೋ ಇಲ್ಲವೋ ನನಗೆ ತಿಳಿಯದು. ಆದರೆ ತಾಯಿಯೇ ದೇವರು ಎನ್ನುವುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

–ಎಚ್.ನರಸಿಂಹಯ್ಯ

ಮನುಷ್ಯನಿಗೆ ಮೆದುಳು ಕೊಟ್ಟ ದೇವರು, ಮರೆಯುವ ಶಕ್ತಿಯನ್ನೇ ಕೊಡದಿದ್ದರೆ, ಆ ಮಿದುಳು ಇಷ್ಟು ಹೊತ್ತಿಗೆ ಎಂಥಾ ರಣರಂಪವಾಗುತ್ತಾ ಇತ್ತು.

–ತರಾಸು

ನಾನು ತಪ್ಪು ಮಾಡದಿದ್ದರೆ ನಾನು ಮಾನವನೇ ಅಲ್ಲ; ನೀನು ಕ್ಷಮಿಸದಿದ್ದರೆ ನೀನು ದೇವರೇ ಅಲ್ಲ.

–ಎಸ್.ವಿ.ಪರಮೇಶ್ವರ ಭಟ್ಟ

ಒಬ್ಬನು ಯಾವ ಯಾವ ವಸ್ತುಗಳನ್ನು ತೊರೆಯುತ್ತಾನೋ ಆ ವಸ್ತುಗಳಿಂದ ಉಂಟಾಗುವ ದುಃಖಗಳಿಲ್ಲದವನಾಗುತ್ತಾನೆ.

–ತಿರುಕ್ಕುರಳ್

ಗುಡ್ಡದಂತೆ ಎತ್ತರವಾಗುವುದರಲ್ಲಿ ನನಗೆ ಆನಂದವಿಲ್ಲ. ನನ್ನ ಮಣ್ಣು ಸುತ್ತಮುತ್ತಲಿನ ನೆಲದ ಮೇಲೆ ಹರಡಿ ಹೋಗುವುದರಲ್ಲಿಯೇ ನನಗೆ ಆನಂದ.

–ವಿನೋಬಾ

ತಾಳ್ಮೆಯಿಂದ ಕಾಯುತ್ತಿದ್ದರೆ ಖಂಡಿತ ಬೆಳಗಾಗಿಯೇ ಆಗುತ್ತದೆ.

–ಖಲೀಲ್ ಗಿಬ್ರಾನ್

ಮೂರ್ಖರು ಜ್ಞಾನಿಗಳಿಂದ ಏನನ್ನೂ ಕಲಿಯುವುದಿಲ್ಲ. ಆದರೆ ಜ್ಞಾನಿಗಳು ಮೂರ್ಖರಿಂದ ಬಹಳ ಕಲಿಯುತ್ತಾರೆ.

–ಡಚ್ ಗಾದೆ

ದೇವತೆಗಳೂ ಹೆಜ್ಜೆ ಇಡಲು ಹೆದರುವಲ್ಲಿ ದಡ್ಡರು ಮುಂದೆ ನುಗ್ಗುತ್ತಾರೆ.

–ಅಲೆಕ್ಸಾಂಡರ್ ಪೋಪ್

ತಿಳಿದವಗೆ ಜಗವೆಲ್ಲ ರಸದೂಟ.

–ಜಿ.ಎಸ್.ಶಿವರುದ್ರಪ್ಪ

ತಿಳಿಯದಿರುವುದು ಕೆಟ್ಟದ್ದು; ತಿಳಿಯಬೇಕೆಂಬ ಅಪೇಕ್ಷೆಯೇ ಇಲ್ಲದಿರುವುದು ಇನ್ನೂ ಕೆಟ್ಟದ್ದು.

–ಆಫ್ರಿಕಾ ಗಾದೆ

ಸಾವಿರ ಹಾಸಿಗೆ ಮೇಲೆ ಮಲಗಿದರೂ, ಬೇಕಾದದ್ದು ಒಂದೇ ಹಾಸಿಗೆ.

–ಜಪಾನಿ ಗಾದೆ

ಪ್ರತಿಯೊಬ್ಬ ಬಾಲಕನಿಗೆ ತನ್ನ ತಂದೆಯೆಂದರೆ ಧೈರ್ಯದ ಮೇರು ಎಂದೆನಿಸುತ್ತದೆ.

–ಕಾಕಾ ಕಾಲೇಲ್ಕರ್

'ನಾನು ಜಾಣ' ಎಂದು ಕೊಳ್ಳುವವನೇ ಭಾರಿ 'ದಡ್ಡ.'

–ವಾಲ್ಟೇರ್